ಕ್ಲಾಸ್ ಮುಂದಕ್ಕೆ ಹೋದಂತೆ ಅದೆಷ್ಟು ಖುಷಿ ಇರುತ್ತೆ. ಅದೇ, ದೊಡ್ಡವರಾದಂತೆ ವಯಸ್ಸು ಹೇಳ್ಕೊಳ್ಳೋಕೆ ಅದ್ಯಾಕೆ ಅಷ್ಟು ಕಸಿವಿಸಿ. ವೇದಾಂತಿಯಾದೆ. ಅಪ್ಪನಾಗಿ ನನಗೂ ಮತ್ತೊಂದು ವರ್ಷ ಹೆಚ್ಚಾಯ್ತು ಅನ್ನೋದು ನೆನಪಿಗೆ ಬಂದು ಮೌನಕ್ಕೆ ಶರಣಾದೆ.

***

‘ಅಯ್ಯಯ್ಯೋ, ಟೈರ್ ನೋಡ್ರೀ, ನಿಮ್ಮ ಟೈರು. ಗಣೇಶನ ಹೊಟ್ಟೆಮೇಲೆ ನಾಗರಹಾವು ಸುತ್ತಿಕೊಂಡಂತೆ ನಿಮ್ಮ ಸೊಂಟದ ಸುತ್ತ ದುರ್ಮಾಂಸ ತುಂಬಿಕೊಂಡಿದೆ. ಅಂಕಲ್ ಅನ್ನದೆ ಅಜ್ಜ ಅನ್ನಬೇಕು ನಿಮ್ಮನ್ನ’ ಶತಮಾನದಿಂದ ಹುದುಗಿಸಿಟ್ಟಿದ್ದ ವ್ಯಂಗ್ಯದ ಅಸ್ತ್ರಗಳನ್ನೆಲ್ಲ ಒಂದೇ ಸಲ ಪ್ರಯೋಗಿಸತೊಡಗಿದರು ಅರ್ಧಾಂಗಿ.

‘ನೀನು ಬೇಯಿಸಿ ಹಾಕೋ ಅನ್ನ ತಿಂದೂ ತಿಂದು ಹೀಗಾಗಿದಿನಿ. ನಾಳೆಯಿಂದ ಅನ್ನ ಕಟ್, ಎಣ್ಣೆ ಪದಾರ್ಥ ಕಟ್, ರಾತ್ರಿ ಮೊಬೈಲ್ ನೋಡೋದು ಕಟ್... ಬೆಳಿಗ್ಗೆ ವಾಕಿಂಗ್ ಸ್ಟಾರ್ಟ್’ ಶಪಥ ಮಾಡುವ ರೀತಿಯಲ್ಲಿ ಹೇಳಿದೆ.

ಮೂರು ದಿನ ಅನ್ನ ಬಿಟ್ಟಿದ್ದಾಯ್ತು. ನಾಲ್ಕು ದಿನ ವಾಕಿಂಗ್ ಹೋಗಿದ್ದಾಯ್ತು. ಮೊಬೈಲ್‌ನಿಂದ ದೂರ ಇದ್ದಿದ್ದು ಒಂದೇ ದಿನ. ಟೈರು–ಟ್ಯೂಬಿನ ಗಾತ್ರಕ್ಕೂ ಇಳಿಯಲಿಲ್ಲ. ಉತ್ಸಾಹ ಮಾತ್ರ ಠುಸ್ !

***

‘ಇದ್ದಂಗ ಇರೂದಿಲ್ಲ... ಜೀವನದಾಗ ಯಾವ್ದೂ ಇದ್ದಂಗಿರೂದಿಲ್ಲ’ ಪ್ರವಚನದಲ್ಲಿ ಹೇಳ್ತಿದ್ರು ಕೊಪ್ಪಳದ ಗವಿಮಠದ ಗವಿಸಿದ್ದೇಶ್ವರ ಸ್ವಾಮೀಜಿ. ‘ಒಂದೆರಡು ಕೂದಲು ಬೆಳ್ಳಗೆ ಆದಕೂಡಲೇ ಎಲ್ರೂ ಬಣ್ಣ ಹಚ್ಚಾರ. ಮಂದಿಗೆ ಗೊತ್ತು... ಇಂವಾ ಬಣ್ಣಾ ಹಚ್ಯಾನ, ಇಂವಾ ಬಣ್ಣ ಹಚ್ಯಾನ ಅಂತಾ. ಆದ್ರೂ ಹಚ್ಕೊಳ್ತೀವಿ. ಚಂದ ಕಾಣಸಬೇಕು ಅಂತಾ ಏನೇನೋ ಮಾಡ್ತೀವಿ. ಆದ್ರ, ಒಂದ್ ತಿಳ್ಕೋರಿ... ಜೀವನದಾಗ ಯಾವ್ದೂ ಇದ್ದಂಗ ಇರೂದಿಲ್ಲ’ ಸ್ವಾಮೀಜಿಗಳ ಮಾತು ಮುಂದುವರಿದಿತ್ತು.

ಹೌದಲ್ವಾ? ಎಲ್ಲವೂ ಬದಲಾಗುತ್ತೆ. ಕಪ್ಪನೆಯ ಕೂದಲು ಬೆಳ್ಳಗಾಗುತ್ತೆ. ಬೆಳ್ಳನೆಯ ಚರ್ಮ ಕಪ್ಪಾಗುತ್ತೆ. ಯಾಕೆ ಇಷ್ಟೆಲ್ಲ ತಲೆ ಕೆಡಿಸ್ಕೋಬೇಕು. ಮದುವೆ ಆಗಿ, ಮಕ್ಕಳಾದ ಮೇಲೆ ಇವೆಲ್ಲ ಯಾಕೆ ಎಂಬ ವೈರಾಗ್ಯ ಭಾವ ಮೂಡಿತು. ವಾಟ್ಸ್‌ಆ್ಯಪ್ ಮೆಸೇಜ್ ಸೌಂಡು. ನೋಡಿದೆ. ‘ಡಿಪಿ ಚೆನ್ನಾಗಿದೆ ಕಣೋ.. ಸ್ಮಾರ್ಟ್ ಆಗಿ ಕಾಣ್ತಿದ್ದೀಯಾ!’. ಸೌಂದರ್ಯ ಜಾಗೃತಿಯ ಬಲೂನು ಹೃದಯದಲ್ಲಿ ಮತ್ತೆ ಹಾರಾಡತೊಡಗಿತು! ತಲೆಗೆ ಬಣ್ಣ, ಬಟ್ಟೆಗೆ ಇಸ್ತ್ರಿ, ಶೂಗೆ ಪಾಲಿಶ್! ಕಚೇರಿಯತ್ತ ಮತ್ತೆ ಅದೇ ಲವಲವಿಕೆಯ ಹೆಜ್ಜೆ. ಟೀವಿಯಲ್ಲಿ ‘ಇಂಪೀರಿಯಲ್ ಬ್ಲ್ಯೂ’ ಜಾಹೀರಾತು ಬರುತ್ತಿತ್ತು. ಮೆನ್ ವಿಲ್ ಬಿ ಮೆನ್! ■













